## ಸಭಾ ಪ್ರಾರ್ಥನೆ

ದೇವರೇ, ನಿನ್ನ ಪ್ರೀತಿಸುವವರನ್ನು ಸದಾ ಹರಸುತ್ತೀರಿ. ಅದನ್ನು ನಮ್ಮ ಕಣ್ಣುಗಳಿಂದ ಗ್ರಹಿಸಲು ಅಸಾಧ್ಯವಾಗಿದೆ. ನಮ್ಮ ಹೃದಯಗಳಲ್ಲಿ ನಿಮ್ಮ ಪ್ರೀತಿ ಹಾಗೂ ಒಳಿತನ್ನು ತುಂಬಿರೆಂದು ಪ್ರಾರ್ಥಿಸುತ್ತೇವೆ. ನಿಮ್ಮ ದಯೆಯಿಂದ ಸದಾ ನಾವು ನಿಮ್ಮನ್ನು ಪ್ರೀತಿಸಿ, ನಮ್ಮದೆಲ್ಲವುಗಳನ್ನು ನಿಮಗೆ ಅರ್ಪಿಸಿ ಎಂದೆಂದು ನಿಮಗಾಗಿ ಜೀವಿಸುವಂತೆ ಮಾಡಿರಿ. ನಿಮ್ಮೊಂದಿಗೆ ಪವಿತ್ರಾತ್ಮರ ಐಕ್ಯದಲ್ಲಿ ದೇವರಾಗಿ ಯುಗಯುಗಾಂತರಕ್ಕೂ ಜೀವಿಸಿ ಆಳುವ ನಮ್ಮ ಪ್ರಭುವೂ ನಿಮ್ಮ ಪುತ್ರರೂ ಆಗಿರುವ ಯೇಸುಕ್ರಿಸ್ತರ ಮುಖಾಂತರ ನಿಮ್ಮನ್ನು ಪ್ರಾರ್ಥಿಸುತ್ತೇವೆ. ಆಮೆನ್

**ಮೊದಲನೆಯ ವಾಚನ: ಪ್ರವಾದಿ ಯೆರೇಮಿಯ** 38:4-6,8-10
**ಕೀರ್ತನೆ:** 40:2-3, 4, 18.
**ಎರಡನೆಯ ವಾಚನ:** ಹಿಬ್ರಿಯರಿಗೆ 12:1-4
**ಶುಭಸಂದೇಶ:** ಲೂಕ 12: 49-53

## ವಿಶ್ವಾಸಿಗಳ ಪ್ರಾರ್ಥನೆ

**ಯಾಜಕ:** ಕ್ರಿಸ್ತರಲ್ಲಿ ಆತ್ಮೀಯ ಯುವಸ್ನೇಹಿತರೆ, ನಾವೀಗ ನಮ್ಮ ಹೃದಯಾಂತರಾಳದ ಕೋರಿಕೆಗಳನ್ನು ಪ್ರಭುವಿನ ಮುಂದಿಟ್ಟು ಭಕ್ತಿಯಿಂದ ನಮ್ಮನ್ನೇ ಅವರಿಗೆ ಸಮರ್ಪಿಸಿ ಅವರಲ್ಲಿ ಒಂದಾಗಿ ಪ್ರಾರ್ಥಿಸೋಣ

1. ನಮ್ಮ ವಿಶ್ವಗುರು ಫ್ರಾನ್ಸಿಸ್, ಎಲ್ಲಾ ಧರ್ಮಾಧ್ಯಕ್ಷರುಗಳು, ನಮ್ಮ ಯಾಜಕರು, ಸೇವಾದರ್ಶಿಗಳು ಹಾಗೂ ಎಲ್ಲಾ ಧಾರ್ಮಿಕ ಸಹೋದರ ಸಹೋದರಿಯರು ತಮ್ಮ ಕರೆಗೆ ಬದ್ಧರಾಗಿ ಯುವ ಸ್ಫೂರ್ತಿಯಿಂದ ತುಂಬಿದವಾರಗಿ ಮರಿಯಳಂತೆ ತ್ವರೆಯಾಗಿ ಸೇವೆ ಸಲ್ಲಿಸುವ ವ್ಯಕ್ತಿಗಳಾಗುವಂತೆ.

2. ನಮ್ಮ ದೇಶದ ನಾಯಕರುಗಳಿಗಾಗಿ ಪ್ರಾರ್ಥಿಸೋಣ. ತಮ್ಮ ಅಧಿಕಾರವನ್ನು ಪ್ರತಿಕಾರ, ಹಗೆತನ ಹಾಗೂ ತಮ್ಮ ಸ್ವಂತ ಹಿತಾಸಕ್ತಿಗೆ ಬಳಸದೆ, ಸದಾ ಪರರ ಒಳಿತಿಗಾಗಿ ಹಾಗೂ ಅವರ ಏಳಿಗೆಗಾಗಿ ಬಳಸುವಂತೆ.

3. ಜೀವನದಲ್ಲಿ ಹತಾಶೆ ಹಾಗೂ ಏಕಾಂಗಿತನವನ್ನು ಅನುಭವಿಸುತ್ತಿರುವ ನಮ್ಮ ಯುವಜನರಿಗಾಗಿ ಪ್ರಾರ್ಥಿಸೋಣ. ಬದುಕಿನಲ್ಲಿ ಅವರು ನಿತ್ಯ ಯುವಕರಾಗಿರುವ ಪ್ರಭು ಕ್ರಿಸ್ತರಿಂದ ನೂತನ ಭರವಸೆಯನ್ನು ಪಡೆದು ಸದಾ ಸಂತೋಷದಿಂದ ಜೀವಿಸುವಂತೆ.

4. ನಮ್ಮ ಧರ್ಮಕೇಂದ್ರದ ಯುವಜನರನ್ನು ಸತ್ಯದ ಹಾದಿಯಲ್ಲಿ ಮುನ್ನಡೆಸುವಂತೆ ಪ್ರಾರ್ಥಿಸೋಣ. ನಮ್ಮ ಯುವಜನರು ಆಧುನಿಕತೆಯ ಭರಾಟೆಗೆ ಒಳಗಾಗದೇ, ಮೊಬೈಲ್, ಇಂಟರ್‌ನೆಟ್ ಹಾಗೂ ಸಾಮಾಜಿಕ ಜಾಲತಾಣಗಳಿಗೆ ದಾಸರಾಗದೆ, ಆಧ್ಯಾತ್ಮಿಕತೆಯೆಡೆಗೆ ಹೆಚ್ಚು ಗಮನ ಹರಿಸುವಂತೆ.

5. ವಿಶ್ವ ಯುವಜನರ ದಿನಾಚರಣೆಯನ್ನು ಆಚರಿಸುತ್ತಿರುವ ಸಂದರ್ಭದಲ್ಲಿ, ದೇವರು ನಮ್ಮ ಯುವಜನರ ಜೀವನವನ್ನು ಸ್ಪರ್ಶಿಸಲಿ ಹಾಗೂ ಅವರನ್ನು ತಮ್ಮ ಪ್ರೀತಿಯಿಂದ ತುಂಬಲಿ. ಸಮಾಜದಲ್ಲಿ ಅವರು ಯೋಗ್ಯ ಜೀವನವನ್ನು ನಡೆಸಿ ಉತ್ತಮ ವ್ಯಕ್ತಿಗಳಾಗಿ ರೂಪಿತವಾಗುವಂತೆ.

**ಯಾಜಕ:** ಪ್ರಭುದೇವರೇ, ನಮ್ಮ ಯುವಜನರನ್ನು ನಿಮ್ಮ ಕಡೆಗೆ ತಿರುಗಿಸಿ, ಅವರಲ್ಲಿ ನಿಮ್ಮ ಭರವಸೆ ಹಾಗೂ ಪ್ರೀತಿಯನ್ನು ಅಧಿಕರಿಸಿರಿ. ಇದರಿಂದ ಅವರು ವಿಶ್ವಾಸವನ್ನು ರೂಡಿಸಿಕೊಂಡು ನಿಮ್ಮಲ್ಲಿ ಒಂದಾಗಿ ಸದಾ ನಿಮಗೆ ಸಾಕ್ಷಿ ನೀಡುವಂತೆ ಮಾಡಿರಿ. ನಾವು ನಿವೇದಿಸಿರುವ ಪ್ರಾರ್ಥನೆಗಳನ್ನು ಆಲಿಸಿರಿ, ನಿಮ್ಮನ್ನು ಎಂದೆಂದು ಪ್ರಭು ಕ್ರಿಸ್ತರ ಮುಖಾಂತರ ಪ್ರಾರ್ಥಿಸುತ್ತೇವೆ. ಆಮೆನ್.

## ಅರ್ಪಣಾ ಪ್ರಾರ್ಥನೆ

ಪ್ರಭೂ, ನಾವು ಅರ್ಪಿಸುತ್ತಿರುವ ಈ ಬಲಿಕಾಣಿಕೆಗಳನ್ನು ಸ್ವೀಕರಿಸಿರಿ. ನೀವು ನಮಗಿತ್ತವುಗಳನ್ನೇ, ನಿಮಗರ್ಪಿಸುವ ನಾವು ಸ್ವತಃ ನಿಮ್ಮನ್ನೇ ಸ್ವೀಕರಿಸಲು ಯೋಗ್ಯರಾಗುವಂತಾಗಲಿ, ನಮ್ಮ ಪ್ರಭು ಕ್ರಿಸ್ತರ ಮುಖಾಂತರ ನಿಮ್ಮನ್ನು ಪ್ರಾರ್ಥಿಸುತ್ತೇವೆ.

## ಕೃತಜ್ಞತಾ ಪ್ರಾರ್ಥನೆ.

ಪ್ರಭೂ, ಪವಿತ್ರ ರಹಸ್ಯದ ಕೊಡುಗೆಗಳನ್ನು ನಾವು ಸ್ವೀಕರಿಸಿದ್ದೇವೆ. ನಿಮ್ಮ ಪುತ್ರರೂ ತಮ್ಮ ಸ್ಮರಣೆಗಾಗಿ ನಮಗೆ ಆಜ್ಞಾಪಿಸಿದ ಇದು ನಮ್ಮಲ್ಲಿ ನಿಮ್ಮ ಪ್ರೀತಿಯನ್ನು ಹೆಚ್ಚಿಸಲಿ, ನಮ್ಮ ಪ್ರಭುಯೇಸು ಕ್ರಿಸ್ತರ ಮುಖಾಂತರ ನಿಮ್ಮನ್ನು ಪ್ರಾರ್ಥಿಸುತ್ತೇವೆ.

**ಅನುವಾದ-ಸ್ವಾಮಿ ವಿನಯ್ ಕುಮಾರ್**
**ಯುವ ನಿರ್ದೇಶಕರು-ಚಿಕ್ಕಮಗಳೂರು ಧರ್ಮಕ್ಷೇತ್ರ**